## 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ

## ಇವರ ನ್ಯಾಯಾಲಯದಲ್ಲಿ, ಬೆಳಗಾವಿ.

ಸ್ಪೆಷಲ್ ಕೇಸ ನಂಃ 963/2019

ಪಿಡಬ್ಲು :2 ಸಿಡಬ್ಲು :6

| | |
|---|---|
| ಸಾಕ್ಷಿಯ ಹೆಸರು | : ಶ್ರೀ ಶ್ರೀಕಾಂತ ಮಾರ್ತಂಡ ಬಾಬಣ್ಣವರ |
| ತಂದೆಯ ಹೆಸರು | : ಶ್ರೀ ಮಾರ್ತಂಡ ಬಾಬಣ್ಣವರ |
| ವಯಸ್ಸು | : 48 ವರ್ಷ |
| ಉದ್ಯೋಗ | : ಒಕ್ಕಲುತನ |
| ವಾಸ್ತವ್ಯ | : ಮುಗಳಖೋಡ |
| ದಿನಾಂಕ | : 21-07-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

### <u>ಮುಖ್ಯ ವಿಚಾರಣೆ</u> : <u>ವಿಶೇಷ ಸರ್ಕಾರಿ ಅಭಿಯೋಜಕರಿಂದ</u>

ಚಾಸಾಃ 1 ಪ್ರಾಸಾಃ 1 ನನಗೆ ಗೊತ್ತಿರುತ್ತಾರೆ. ಚಾಸಾಃ 7 ಅರಿಹಂತ ಮತ್ತು ಚಾಸಾಃ 8 ಪೊನಂಜಿ ನನಗೆ ಗೊತ್ತಿರುತ್ತಾರೆ. ನ್ಯಾಯಾಲಯದಲ್ಲಿ ಹಾಜರಿರುವ ಎಲ್ಲಾ ಆರೋಪಿತರನ್ನು ಗುರುತಿಸುತ್ತೇನೆ ಎಂದು ಹೇಳಿ, ಎಲ್ಲಾ ಆರೋಪಿತರನ್ನು ಗುರುತಿಸಿ ಗೈರು ಹಾಜರಾಗಿರುವ ಆರೋಪಿತರನ್ನು ಸಹ ಗುರುತಿಸುತ್ತೇನೆ ಎಂದು ಹೇಳಿದ್ದಾರೆ. ( 5 to 7, 9 to 13, 14 to 16 ನೇ ಆರೋಪಿತರ ಗುರುತಿಸುವಿಕೆಯನ್ನು ಅಲ್ಲಗಳೆಯುವುದಿಲ್ಲ ಎಂದು ಆರೋಪಿತರ ಪರ ವಕೀಲರು ಅರ್ಜಿ ಸಲ್ಲಿಸಿದ್ದು, ಅರ್ಜಿಯನ್ನು ಪುರಸ್ಕರಿಸಲಾಗಿದೆ.) ನಮ್ಮೂರಿನಲ್ಲಿರುವ ಖಾಲಿ ಜಾಗ ನಂಬರ 643 ಕ್ಕೆ ಸಂಬಂಧಿಸಿದಂತೆ ನನಗೆ ಹಾಗೂ ಆರೋಪಿತರಿಗೂ ತಕರಾರು ಇದೆ. ಸೈಟ ನಂಬರ 643 ಮೂಲತಃ ರಾವುಸಾಬ ಲಕ್ಷ್ಮಣರವರಿಗೆ ಸೇರಿತ್ತು. ರಾವುಸಾಬ ಲಕ್ಷ್ಮಣ ನನ್ನ ದೊಡ್ಡಪ್ಪನ ಮಗ. ಸೈಟ ನಂಬರ 643 ರಲ್ಲಿರುವ ಖಾಲಿ ಜಾಗ ನಮ್ಮ ಒಟ್ಟು ಕುಟುಂಬಕ್ಕೆ ಸೇರಿದ್ದಾಗಿದೆ.

2. ಸದರಿ ಖಾಲಿ ಜಾಗವು ಸರ್ಕಾರಕ್ಕೆ ಸೇರಿದ್ದು ಎಂದು ಆರೋಪಿತರು ನಮ್ಮೊಂದಿಗೆ ತಕರಾರು ಮಾಡುತ್ತಿದ್ದಾರೆ. ದಿಃ 26-08-2017 ರಂದು ಬೆಳಗ್ಗೆ 9.00 ಗಂಟೆಗೆ ನಾನು,

ಚಾಸಾಃ 1, ಚಾಸಾಃ 7 ಮತ್ತು ಚಾಸಾಃ 8, ಚಾಸಾಃ10 ಮತ್ತು ಚಾಸಾಃ 11 ರವರು ಸೈಟ ನಂಬರ 643 ಕ್ಕೆ ಕಟ್ಟಡ ಕಟ್ಟುವ ಸಲುವಾಗಿ ಪೂಜೆ ಮಾಡಲು ಹೋಗಿದ್ದೇವು.

3. ಆ ಸಮಯದಲ್ಲಿ ಆರೋಪಿತರೆಲ್ಲರೂ ಬಂದು ನಮ್ಮ ಜೊತೆ ತಕರಾರು ಮಾಡಿದರು. ಆರೋಪಿತರು ಆ ಜಾಗ ನಮಗೆ ಸೇರಿದ್ದು ಎಂದು ಅಲ್ಲಿ ಕಟ್ಟಡ ಕಟ್ಟಬಾರದೆಂದು ತಕರಾರು ಮಾಡಿದರು. ಸ್ಥಳದಲ್ಲಿ ಚಾಸಾಃ 23 ರವರು ಜಾರಿ ಬಿದ್ದರು. ಆತನನ್ನು ನಾವು ಎದ್ದೇಳಿಸಲು ನಾವು ಆತ ಬಿದ್ದ ಸ್ಥಳಕ್ಕೆ ಹೋದೇವು. ಅದನ್ನು ನೋಡಿ ಆರೋಪಿತರೆಲ್ಲರೂ ಮಕ್ಕಳರಾ ನಿಮ್ಮದು ಬಾಳ ಆಗ್ಯೆತಿ ಅಂತಾ ಬೈದರು. ನಂತರ 2ನೇ ಆರೋಪಿ ನನಗೆ ಕಬ್ಬಿಣದ ರಾಡ್‌ನಿಂದ ನನ್ನ ಎಡಕಾಲಿಗೆ ಹೊಡೆದರು, 3 ನೇ ಆರೋಪಿ ವಿಠ್ಠಲ ಕಲ್ಲಿನಿಂದ ನನ್ನ ತಲೆಗೆ ಹೊಡೆದರು. ಚಾಸಾಃ1 ನೇಮಿನಾಥರವರಿಗೆ 5 ನೇ ಆರೋಪಿ ಶ್ರೀಶೈಲ ಕಬ್ಬಿಣದ ರಾಡನಿಂದ ಎಡಗಾಲಿನ ಮೇಲೆ ಮತ್ತು ತಲೆಗೆ ಹೊಡೆದರು. ಚಾಸಾಃ7 ಅರಿಹಂತರವರಿಗೆ 1 ನೇ ಆರೋಪಿ ಕಬ್ಬಿಣದ ರಾಡನಿಂದ ಕೈಗೆ ಹೊಡೆದರು. 4 ನೇ ಆರೋಪಿ ಚಾಸಾಃ7 ರವರಿಗೆ ಕಲ್ಲಿನಿಂದ ತಲೆಗೆ ಹೊಡೆದರು. ಚಾಸಾಃ 8 ಪೊನಂಜಿರವರಿಗೆ 9ನೇ ಆರೋಪಿ ಕಲ್ಲಿನಿಂದ ಕಣ್ಣಿಗೆ ಹೊಡೆದನು. ಚಾಸಾಃ 9 ರವರಿಗೆ 14 ನೇ ಆರೋಪಿ ಅಂಬರೀಷ ಕಬ್ಬಿಣದ ರಾಡ್‌ನಿಂದ ಕಾಲಿಗೆ ಹೊಡೆದನು. ಚಾಸಾಃ 13 ರಾಮಚಂದ್ರ, ಚಾಸಾಃ 10 ಅಜಿತ ಬಾಬಣ್ಣ, ಚಾಸಾಃ 11 ಹನಮಂತ ಬಾಬಣ್ಣ ಮತ್ತು ಇತರರು ಬಂದು ಜಗಳ ಬಿಡಿಸಿದರು.

4. ಆರೋಪಿತರು ರಂಡೆ ಮಕ್ಕಳರಾ ಇನ್ನೊಂದು ಸಾರಿ ಜಾಗದ ವಿಚಾರಕ್ಕೆ ಬಂದರೆ ನಿಮ್ಮನ್ನು ಜೀವ ಸಹಿತ ಉಳಿಸುವುದಿಲ್ಲ ಅಂತಾ ಜೀವದ ಬೆದರಿಕೆ ಹಾಕಿದರು.

5. ನಾನು ಮತ್ತು ಇತರೆ ಗಾಯಾಳುಗಳು ಹಾರೂಗೇರಿ ನಾರಗೊಂಡ ಖಾಸಗಿ ಆಸ್ಪತ್ರೆಗೆ ಹೋಗಿ ಒಳರೋಗಿಯಾಗಿ ಚಿಕಿತ್ಸೆ ಪಡೆದೆವು. ಆ ಸಮಯದಲ್ಲಿ ಪೋಲಿಸರು ಆಸ್ಪತ್ರೆಗೆ ಭೇಟಿ ನೀಡಿ ನಮ್ಮ ಹೇಳಿಕೆ ಪಡೆದುಕೊಂಡರು.

6. ಆರೋಪಿತರು ನಮಗೆ ಹೊಡೆದ ರಾಡ್ ಮತ್ತು ಕಲ್ಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಸಾಕ್ಷಿ ಗುರುತಿಸಿದ್ದಾರೆ. ಅವುಗಳನ್ನು ಈಗಾಗಲೇ ಮು.ಮಾ.2 ರಿಂದ ಮು.ಮಾ.4 ಎಂದು ಗುರುತಿಸಲಾಗಿದೆ.

7. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ, ಘಟನೆ ಸಮಯದಲ್ಲಿ ನಾನು ಧರಿಸಿದ ಹಾಗೂ ರಕ್ತ ಅಂಟಿದ ಜಾಂಬಳೆ(ನೇರಳೆ) ಬಣ್ಣದ ಪೂರ್ಣ ತೋಳಿನ ಶರ್ಟನ್ನು ಪಂಚನಾಮೆ ಮಾಡಿ ಪೋಲಿಸರು ತೆಗೆದುಕೊಂಡು ಹೋದರು. ಪಂಚನಾಮೆಯನ್ನು ನಿಪಿಃ2 ಎಂದು ಗುರುತಿಸಲಾಗಿದೆ. ಪಂಚನಾಮೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿಃ 2 (ಬಿ) ಎಂದು ಗುರುತಿಸಲಾಯಿತು. ನನ್ನ ಶರ್ಟನ್ನು ನಾನು ನೋಡಿದರೆ ಗುರುತಿಸುತ್ತೇನೆ. ಅದನ್ನು ಈಗಾಗಲೇ ಮು.ಮಾ.6 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲು:ಆರೋಪಿತರ ಪರ ಶ್ರೀಮತಿ.ಪಿ.ಎನ್.ಎಮ್. ವಕೀಲರು ಶ್ರೀ.ಹೆಚ್.ಸಿ.ಎಸ್ ವಕೀಲರ ಪರವಾಗಿ**

ಆರೋಪಿತರ ಪರ ಶ್ರೀಮತಿ.ಪಿ.ಎನ್.ಎಮ್.ವಕೀಲರು ತಮ್ಮ ಹಿರಿಯ ವಕೀಲರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಬೇರೊಂದು ಪ್ರಕರಣದಲ್ಲಿ ಹಾಜರಾಗಿರುವುದರಿಂದ ಪಾಟೀ ಸವಾಲು ಮಾಡಲು ಮನವಿ ಮಾಡಿದ್ದಾರೆ. ಮನವಿಯನ್ನು ಪರಿಗಣಿಸಿ ಪಾಟೀ ಸವಾಲಿಗಾಗಿ ಸಮಯಾವಕಾಶ ನೀಡಲಾಯಿತು.

**ಪಾಟೀ ಸವಾಲು:ಆರೋಪಿತರ ಪರ ಶ್ರೀ.ಆರ್.ಕೆ.ಬಿ ವಕೀಲರು**

ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.